# ನಗು ಮೀಮಾಂಸೆ

ನಗುವಿಗೂ ಆರೋಗ್ಯಕ್ಕೂ ಸಂಬಂಧವಿದೆ. ಈ ಸಂಬಂಧಕ್ಕೆ ಆಧುನಿಕ ಸಂದರ್ಭ ಅಡಿಗೆರೆ ಎಳೆದಿದೆ. ಉಸಿರುಗಟ್ಟಿಸುವ ದೈನಿಕದಲ್ಲಿ ಒತ್ತಡ ಶಮನಕದ ರೂಪದಲ್ಲಿ ನಗುವನ್ನು ನೋಡಲಾಗುತ್ತಿದೆ. ‘ಸಾಧ್ಯವಾದಾಗಲೆಲ್ಲ ನಗಿ. ಅದು ಅಗ್ಗದ ಔಷಧಿ’ ಎನ್ನುವ ಹದಿನೆಂಟನೇ ಶತಮಾನದ ಬ್ರಿಟಿಷ್ ಕವಿ ಲಾರ್ಡ್ ಬೈರನ್ ಮಾತನ್ನು ಗಮನಿಸಿದರೆ, ನಗುವನ್ನು ಔಷಧಿ ರೂಪದಲ್ಲಿ ನೋಡುವ ಒಂದು ಪರಂಪರೆಯೇ ಇದೆಯೆನ್ನಬಹುದು.

ಔಷಧಿಗುಣ ಆರೋಪಿಸಿರುವ ಕಾರಣದಿಂದಾಗಿ ನಗುವಿಗೆ ಮಾರುಕಟ್ಟೆಯ ನಂಟು ದೊರೆತಿದೆ. ನಗುವುದು ಹೇಗೆಂದು ‘ಲಾಫಿಂಗ್ ಕ್ಲಬ್’ಗಳು ಹೇಳಿಕೊಡುತ್ತಿವೆ. ನಗು ಮೀಮಾಂಸೆ ದೊಡ್ಡದಾಗುತ್ತಲೇ ಇದೆ. ‘ಹಾಸ್ಯೋತ್ಸವ’ಗಳು ರೂಪುಗೊಂಡು ಬೇಡಿಕೆ ಗಳಿಸಿಕೊಂಡಿವೆ. ಸ್ಟಾಂಡಪ್ ಕಾಮಿಡಿಯನ್‌ಗಳ ತಳಿಯೊಂದು ವಿಶ್ವವ್ಯಾಪಿಯಾಗಿದೆ. ನಗಿಸುವುದನ್ನೇ ಗುರಿಯನ್ನಾಗಿಸಿಕೊಂಡು ಕಿರುತೆರೆಯಲ್ಲಿ ರಿಯಾಲಿಟಿ ಶೋಗಳೂ, ಬೆಳ್ಳಿತೆರೆಯಲ್ಲಿ ಸಿನಿಮಾ ಸರಣಿಗಳೂ ರೂಪುಗೊಳ್ಳುತ್ತಿವೆ. ನಗು, ಈಗ ಎಲ್ಲರಿಗೂ ಬೇಕು! ‘ನಕ್ಕು ಕೆಟ್ಟವರಿಲ್ಲ’ ಎನ್ನುವ ಮಾತನ್ನು ಪೂರ್ಣ ಪ್ರಮಾಣದಲ್ಲಿ ಒಪ್ಪಲಾಗದಿದ್ದರೂ, ನಗಿಸಿ ಕೆಟ್ಟವರು ತೀರಾ ಕಡಿಮೆ. ಇತರರ ನಗುವನ್ನೇ ತಮ್ಮ ನಗ–ನಗದನ್ನಾಗಿಸಿಕೊಂಡವರ ಉದಾಹರಣೆಗಳು ಸಾಕಷ್ಟಿವೆ.

ಯುವ ತಲೆಮಾರಿಗಂತೂ ನಗು ಎನ್ನುವುದು ಯಾವ ಕ್ಷಣದಲ್ಲಾದರೂ ಬಿರಿದರಳುವ ತುಟಿಗೆ ಅಂಟಿಕೊಂಡ ಮೊಗ್ಗು. ಸಾರ್ವಜನಿಕವಾಗಿ ನಗಲು ಹಿಂದೆಮುಂದೆ ನೋಡುವ ಕಾಲವೊಂದಿತ್ತು. ಸಶಬ್ದದೊಂದಿಗೆ ನಗಲು ಹಿಂಜರಿಯುವವರೂ ಇದ್ದರು. ಈಗಿನವರು ಎಲ್ಲೆಂದರಲ್ಲಿ ಯಾವಾಗ ಬೇಕಾದರೂ ಸಿಗ್ಗಿಲ್ಲದೆ ನಗುತ್ತಾರೆ. ದೊಡ್ಡದಾಗಿ ಸದ್ದು ಮಾಡಿಕೊಂಡು ನಗುತ್ತಾರೆ. ಜೋಗ್‌ಫಾಲ್ಸ್ ಇದ್ದಂತೆ ಜೋಕ್‌ಫಾಲ್ಸ್!

ಮೊಬೈಲ್ ಫೋನ್‌ಗಳೊಂದಿಗೆ ಕ್ಯಾಮೆರಾಗಳನ್ನು ಕಸಿ ಮಾಡಿದ ನಂತರ ‘ಸೆಲ್ಫಿ ಸಂಸ್ಕೃತಿ’ಯೊಂದು ಶುರುವಾಯಿತಷ್ಟೇ. ಮೊಗದೆದುರು ಮೊಬೈಲ್ ಹಿಡಿದರಾಯಿತು; ಮೊಗದಲ್ಲಿ ಇನ್‌ಸ್ಟಂಟ್ ನಗು! ನಗಲಿಕ್ಕೊಂದು ನೆಪವೋ ಕಚಗುಳಿಯ ಸ್ಪರ್ಶವೋ ಈಗ ಅನಗತ್ಯ. ನೆಪವಿಲ್ಲದೆಯೂ ನಗಬಲ್ಲವರ ಜಮಾನವಿದು. ಮಾತಿಗೊಮ್ಮೆ ನಗು ತುಳುಕಿಸುವವರು, ಮಾತಿಗಿಂತಲೂ ಹೆಚ್ಚು ನಗುವವರು ಈಗ ಎಲ್ಲೆಡೆ ಇದ್ದಾರೆ.

ನಗು ಎನ್ನುವುದು ಒಂದು ಸುಂದರ ಭಾವ. ಭೂಮಿಯ ನಗುವಿನ ರೂಪದಲ್ಲಿ ಹೂಗಳನ್ನು ಕಾಣುವ ಕವಿಕಲ್ಪನೆ ನಗೆಯ ಸೌಂದರ್ಯವನ್ನು ಸೂಚಿಸುವಂತಹದ್ದು. ಆದರೆ, ಗೆರೆ ಕೊಂಚ ಏರುಪೇರಾದರೆ ನಗುವಿನ ಸೌಂದರ್ಯ ಅಪಾಯ ಆಗಬಲ್ಲದು.

ನಗುವಿಗೆ ನೂರೆಂಟು ಪ್ರಯೋಜನಗಳು ಎನ್ನುವುದರ ಬಗ್ಗೆ ಯಾರಿಗೂ ತಕರಾರಿರಲಿಕ್ಕಿಲ್ಲ. ನಾವೀಗ ಯೋಚಿಸಬೇಕಾಗಿರುವುದು, ಪ್ರಯೋಜನಗಳ ಪ್ರಭಾವಳಿಯಾಚೆಗೆ ನಗುವಿಗೆ ಇರಬಹುದಾದ ಸಾಧ್ಯತೆಗಳನ್ನು. ನಗುವಿಗೊಂದು ಘನತೆ ಇದೆಯೇ? ನಗುವನ್ನು ವ್ಯಕ್ತಿತ್ವದ ಹಾಗೂ ಅಭಿರುಚಿಯ ರೂಪದಲ್ಲೂ ನೋಡಬಹುದೆ? ಎನ್ನುವ ಪ್ರಶ್ನೆಗಳನ್ನು ಎದುರಿಗಿಟ್ಟುಕೊಂಡರೆ ನಗುವಿನ ಕುರಿತಾದ ನಮ್ಮ ಪರಿಕಲ್ಪನೆ ಎಷ್ಟು ಸೀಮಿತ ಎನ್ನುವುದು ಅರ್ಥವಾಗುತ್ತದೆ.

ನಗುವಿನ ಘನತೆಯ ಬಗ್ಗೆ ಯೋಚಿಸುವಾಗ ಥಟ್ಟನೆ ಕಣ್ಣೆದುರು ಮಿನುಗುವುದು, ಬುದ್ಧನ ಮಂದಹಾಸ. ಬುದ್ಧನ ಮೊಗವೋ ಸದಾ ಅರೆಬಿರಿದ ಮೊಗ್ಗು. ತುಟಿಗಳಲ್ಲಿ, ಕಣ್ಣುಗಳಲ್ಲಿ ಕರುಣೆಯ ಹೊಳಪು. ಬುದ್ಧನ ಅಳತೆಮೀರದ ನಗು ಇಡೀ ಜಗತ್ತಿಗೆ ಔಷಧದಂತಿತ್ತು. ಆದರೆ, ಆ ನಗುವಿನ ಹಿಂದೆ ಸಂತೋಷ ಇತ್ತೆಂದು ಹೇಳಲಾಗದು. ಮನುಕುಲದ ದುಃಖಕ್ಕೆ ಉತ್ತರ ಕಂಡುಕೊಳ್ಳುವ ಪ್ರಯತ್ನದಲ್ಲಿ ಬುದ್ಧ ಎದುರಾದುದು ಮತ್ತಷ್ಟು ದುಃಖವನ್ನೇ! ಅಳಿಸುತ್ತಾ ಹೋದಷ್ಟೂ ದೊಡ್ಡದಾಗುವ ಗೆರೆಯ ಹಿಂದೆ ಬಿದ್ದ ಬುದ್ಧನ ನಗೆಯ ಹಿಂದೆ ಮನುಕುಲದ ಅಖಂಡ ದುಃಖವೂ ಮೌನವೂ ಮಿಳಿತಗೊಂಡಂತಿದೆ.

ಬುದ್ಧನಷ್ಟೇ ಅಲ್ಲ, ಸಹ ಮನುಷ್ಯನ ಸಂಕಟಗಳಿಗೆ ಮಿಡಿಯುವ ಯಾವ ಹೃದಯವೂ ದೊಡ್ಡ ಧ್ವನಿಯಲ್ಲಿ ನಗಲಾರದು. ಮನಸಾರೆ ನಗುವ ಪುರುಸೊತ್ತೂ ಅವರಿಗಿರಲಾರದು. ಹಾಗಾದರೆ, ನಗು ಉಳ್ಳವರ ಸ್ವತ್ತೆ? ಹೌದು ಅಥವಾ ಇಲ್ಲ ಎನ್ನುವುದು ಸಾಂದರ್ಭಿಕ ಸತ್ಯಗಳಷ್ಟೇ.

ನಗು ಗೆರೆ ಮೀರಿದಾಗ ಆಗುವ ಅನಾಹುತಕ್ಕೆ ‘ಮಹಾಭಾರತ’ ಅತ್ಯುತ್ತಮ ನಿದರ್ಶನ. ನೆಲವನ್ನು ಕೊಳವೆಂದು ಭ್ರಮಿಸಿದ ಸುಯೋಧನನ ಪೇಚು ಕಂಡು ದ್ರುಪದನಂದನೆ ಜೋರುದನಿಯಲ್ಲಿ ನಕ್ಕಿದ್ದೇ ಕುರುಕ್ಷೇತ್ರಕ್ಕೆ ಪ್ರಮುಖ ಕಾರಣವಾಯಿತು; ನಗೆ ಹಗೆಯಾಯಿತು. ಕೇಡಿನ ಅರಿವಿಲ್ಲದೆ ದ್ರೌಪದಿ ನಕ್ಕಿದ್ದು ದೊಡ್ಡ ಅನಾಹುತಕ್ಕೆ ಕಾರಣವಾಯಿತು. ನಾವೋ, ಕೇಡಿನ ಅರಿವಿದ್ದೂ ನಗುತ್ತೇವೆ. ಇನ್ನೊಬ್ಬರ ಸಂಕಟವೂ ಪೇಚಾಟವೂ ನಮಗೆ ಗೇಲಿಯ ವಸ್ತುವಾಗುತ್ತದೆ. ನಗು ಇಷ್ಟೊಂದು ಸದರವಾಗಬಹುದೆ?

ಬುದ್ಧನ ಮೂಲಕ, ಬಾಪುವಿನ ಮೂಲಕ, ತೆರೇಸಾ ತಾಯಿಯ ಮೂಲಕ, ನಗುವಿಗೊಂದು ಘನತೆ–ವ್ಯಕ್ತಿತ್ವ ಪ್ರಾಪ್ತಿಯಾಯಿತು. ನಗುವಿನ ಅಭಿರುಚಿಯ ರಾಯಭಾರಿ ಚಾರ್ಲಿ ಚಾಪ್ಲಿನ್. ಹಗೆಯಿಲ್ಲದ ನಗೆ ಆತನದು. ನಗೆಯ ಹಿಂದೆ ನೋವಿನ ಮಡುವೂ ಇರಬಲ್ಲುದು ಎನ್ನುವುದಕ್ಕೂ ಚಾಪ್ಲಿನ್ ಉದಾಹರಣೆ. ಚಾಪ್ಲಿನ್ ನಗು ದೇಶ–ಕಾಲಗಳೊಂದಿಗೆ ಭಾಷೆಯನ್ನೂ ಮೀರಿದ್ದು; ಎಲ್ಲ ವಯೋಮಾನದವರನ್ನೂ ಪ್ರಫುಲ್ಲಗೊಳಿಸುವಂತಹದ್ದು.

‘ನಗೆಪೇಟೆ’ಯೊಂದು ಚಾಲ್ತಿಯಲ್ಲಿರುವ ದಿನಗಳಲ್ಲಿ ನಗುವಿಗೂ ಅಭಿರುಚಿಗೂ ಅಂತರ ಹೆಚ್ಚಾಗುತ್ತಿದೆ. ಮನಸ್ಸನ್ನು ಕೆರಳಿಸುವ, ಉದ್ದೀಪಿಸುವ ಮಾತು–ಕೃತಿಗಳೆಲ್ಲ ನಗೆಯ ರೂಪ ತಾಳತೊಡಗಿವೆ. ಬಿಂಬಗಳ ರೂಪದಲ್ಲಿ ನಗೆಯ ದೊಡ್ಡ ಸರಕು ಅಂಗೈಯಲ್ಲಿನ ಮೊಬೈಲ್‌ಗಳಲ್ಲಿ ಇಣುಕುತ್ತಿದೆ. ‘ಇದೇನಾ ಸಭ್ಯತೆ? ಇದೇನಾ ಸಂಸ್ಕೃತಿ?’ ಎನ್ನುವ ಕ್ಲೀಷೆಯ ಹಾಡು ‘ಸದ್ಯದ ನಗು’ವಿಗೆ ಸಂಬಂಧಿಸಿದಂತೆ ಧ್ವನಿಪೂರ್ಣ ಎನ್ನಿಸುತ್ತದೆ.

ನಮಗೆ ಬೇಕಾದುದು ಮಗುವಿನ ನಗು. ಅಲ್ಲಿ ಸದ್ದಿರುವುದಿಲ್ಲ. ನಗುವಿಗೆ ಪ್ರಚೋದನೆಯೂ ಇರುವುದಿಲ್ಲ. ಸದ್ದಿಲ್ಲದೆ ಅರಳುವ ಹೂವಿನಷ್ಟೇ ಸಹಜವಾದುದು ಮಗು ಮುಖದಲ್ಲಿನ ನಗು! ಬೆಲೆ ಕಟ್ಟಲಾಗದ ಆ ನಗುವಿಗೆ ಮರುಳಾಗದವರು ಯಾರು?

■ **ಚಂಪಕಮಾಲಾ**

## ಮಾತೇ ಮುತ್ತು

- ಕ್ಷಮೆಯೇ ಯಶಸ್ಸು, ಧರ್ಮ. ಕ್ಷಮೆಯಲ್ಲಿಯೇ ಚರಾಚರ ಜಗತ್ತು ಅಡಗಿದೆ.
  —ವಾಲ್ಮೀಕಿ
- ಕಾಲದ ಪ್ರಜ್ಞೆ ಇಲ್ಲದವನಿಗೆ ಗಡಿಯಾರ ಬರಿಯ ಅಲಂಕಾರವಷ್ಟೇ.
  —ಕೆ.ಎಸ್. ನಿಸಾರ್ ಅಹಮದ್
- ಅತೀ ಭೋಗ, ಕೋಪ ಮತ್ತು ದುರಾಸೆ ಈ ಮೂರೂ ಅತ್ಯಂತ ಪ್ರಬಲ ದುಷ್ಟ ಶಕ್ತಿಗಳು.
  —ತುಳಸಿದಾಸ
- ನಮ್ಮ ಮಾತಿಗಿಂತ ನಮ್ಮ ಜೀವನವನ್ನೇ ನಮ್ಮ ವಿಷಯವಾಗಿ ಮಾತನಾಡಲು ಬಿಡುವುದು ಉತ್ತಮ.
  —ಗಾಂಧೀಜಿ
- ನಮ್ಮ ಜೀವನವು ನಾವು ದೀರ್ಘಕಾಲ ಹಗೆತನ ಸಾಧಿಸುವಷ್ಟು ಸುದೀರ್ಘವಾದದ್ದಲ್ಲ.
  —ಎಲಾನ್ ಮಸ್ಕ್
- ಯಾರಾದರೂ ಕೃತಘ್ನರಾದರೆ ಅದು ಅವರ ದೋಷ. ಆದರೆ, ನೀನು ಸಜ್ಜನಿಕೆ ತೋರದಿದ್ದರೆ ಅದು ನಿನ್ನ ದೋಷ.
  —ಅ.ನ. ಕೃಷ್ಣರಾಯ
- ಬಾಳುವಷ್ಟು ಕಾಲ ಕಲಿಯುತ್ತಲೇ ಇರಬೇಕು.
  —ತೀ.ನಂ. ಶ್ರೀಕಂಠಯ್ಯ
- ಹೃದಯವಂತಿಕೆ ಇಲ್ಲದಿರುವಾಗ ಬುದ್ಧಿವಂತಿಕೆ ಎಷ್ಟಿದ್ದರೂ ಪ್ರಯೋಜನವಾಗದು.
  —ಎಡ್ವರ್ಡ್ ಯಂಗ್